# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ವೀರೇಶಾನಂದ

ಭಾಗ ೨

## ಬೋಸ್ಟನ್ ನಗರದಲ್ಲಿ ಸ್ವಾಮೀಜಿ

'ಭಗವಂತನ ಇಚ್ಛೆಯನ್ನು ಅರಿತವರಿಲ್ಲ!'

ಸ್ವಾಮಿ ವಿವೇಕಾನಂದರು ಶಿಕಾಗೋದಿಂದ ಬೋಸ್ಟನ್ ನಗರಕ್ಕೆ ಯಾವ ರೈಲ್ವೇ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದರೋ, ಅದರಲ್ಲಿಯೇ ಒಬ್ಬ ವೃದ್ಧ ಮಹಿಳೆಯನ್ನು ಭೇಟಿಮಾಡಿದರು. ಆಕೆ ಸ್ವಾಮೀಜಿಯನ್ನು ತನ್ನ ತೋಟದ ಮನೆಗೆ ಕರೆದುಕೊಂಡು ಹೋದಳು. ಆಕೆಯ ಹೆಸರು ಕ್ಯಾಥರೀನ್ ಅಬ್ಬಾಟ್ ಸ್ಯಾನ್ ಬೋರ್ನ್. ಆಕೆಯ ತೋಟದ ಮನೆಯ ಹೆಸರು ಬ್ರೀಜೀ ಮೆಡೋಸ್. ಆಕೆ ಸ್ವಾಮೀಜಿಯವರನ್ನು ತನ್ನ ಸ್ನೇಹಿತರಿಗೆ ಪರಿಚಯಿಸಿದಳು.

ಕ್ಯಾಥರೀನ್ ಸ್ಯಾನ್‌ಬೋರ್ನ್ ಒಬ್ಬ ಪ್ರತಿಷ್ಠಿತ ಮಹಿಳೆ. ಈ ವೃದ್ಧಮಹಿಳೆಯು ಒಂದು ಕಾಲದಲ್ಲಿ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿದ್ದಳು. ಅವಳ ಮಾತಿನಲ್ಲಿ ಹಾಸ್ಯಭಾವ ಎದ್ದುಕಾಣುತ್ತಿತ್ತು. ಬಹಳ ದೈಹಿಕ ಮತ್ತು ಮಾನಸಿಕ ಶಕ್ತಿಯುಳ್ಳವಳಾಗಿದ್ದಳು. ಸುತ್ತಲಿನ ಜನರ ಬಗ್ಗೆ ಆಕೆ ಅನುಕಂಪವನ್ನು ತೋರಿಸುತ್ತಿದ್ದಳು. ಹಾಗೆಯೇ ಸಮಾಜದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಳು.

ಅಂದಿನ ಕಾಲದ ವೃತ್ತಪತ್ರಿಕೆಗಳಲ್ಲಿ ಸ್ವಾಮೀಜಿಯ ಬೋಸ್ಟನ್ ವಾಸ್ತವ್ಯದ ಬಗ್ಗೆ ಹಲವಾರು ಉಲ್ಲೇಖಗಳು ನಮಗೆ ಲಭಿಸುತ್ತವೆ. ಸ್ವಾಮೀಜಿ ಆ ಕಾಲದ ಮಹಿಳಾ ಸುಧಾರಕಿಯಾಗಿದ್ದ ರಮಾಬಾಯಿ ಎನ್ನುವವಳನ್ನು ಬೆಂಬಲಿಸುತ್ತಿದ್ದ ಮಹಿಳಾ ಕ್ಲಬ್ ಒಂದರಲ್ಲಿ ಭಾಷಣ ಮಾಡಿದರು. ಹಾಗೆಯೇ ಮಹಿಳಾ ಸುಧಾರಣ ಗೃಹಕ್ಕೂ ಅವರು ಭೇಟಿಕೊಟ್ಟಿದ್ದರು. ಇದು ಒಂದು ಜೈಲಿನಂತೆ ಇರದೆ, ಅವರನ್ನು ಪರಿವರ್ತಿಸುವ ವಾಸಗೃಹವಾಗಿರುವುದನ್ನು ಕಂಡು ಅದನ್ನು ಪ್ರಶಂಸೆ ಮಾಡಿದರು. ಅಲ್ಲಿ ಭಾರತದ ಮಹಿಳೆಯರ ನಡೆನುಡಿಗಳು, ಸಂಪ್ರದಾಯಗಳು, ಜೀವನಶೈಲಿ — ಈ ಅಂಶಗಳ ಬಗ್ಗೆ ಭಾಷಣ ಮಾಡಿದರು. ಬೋಸ್ಟನ್‌ನಿಂದ ಪ್ರಕಟವಾಗುತ್ತಿದ್ದ Evening Transcript ಎಂಬ ಪತ್ರಿಕೆಯು ೧೮೯೩, ಆಗಸ್ಟ್ ೨೩ರ ತಾರೀಖಿನಂದು ಈ ಭೇಟಿಯ ಬಗ್ಗೆ ವರದಿಮಾಡಿತು.

ಫ್ರಾಂಕ್ಲಿನ್ ಬೆಂಜಮಿನ್ ಸ್ಯಾನ್‌ಬೋರ್ನ್ ಎನ್ನುವವರು ಕ್ಯಾಥರೀನ್ ಸ್ಯಾನ್‌ಬೋರ್ನ್‌ಳ ಸಂಬಂಧಿ. ಬೋಸ್ಟನ್‌ನಲ್ಲಿದ್ದ




ಕ್ಯಾಥರೀನ್ ಸ್ಯಾನ್‌ಬೋರ್ನ್, ತನ್ನ ಮನೆಯಲ್ಲಿ

ಅವರ ಮನೆಗೆ ಸ್ವಾಮೀಜಿ ಭೇಟಿಕೊಟ್ಟರು. ವೃದ್ಧರಾಗಿದ್ದ ಅವರಿಗೆ ಒಂದು ಸಂದೇಹ ಬಂದಿದಂತೆ: ಸ್ವಾಮಿ ವಿವೇಕಾನಂದರು ಹಿಂದೂ ಸಂನ್ಯಾಸಿಯೋ, ಇಲ್ಲವೇ ಬೌದ್ಧ ಭಿಕ್ಷುವೋ ಎಂದು. ಆದರೆ ಸ್ವಾಮೀಜಿಯರನ್ನು ಭೇಟಿಮಾಡಿದಾಗ ಆ ಸಂದೇಹ ಕಳೆಯಿತು. ಶ್ರೀಯುತ ಫ್ರಾಂಕ್ಲಿನ್ ಸ್ಯಾನ್‌ಬೋರ್ನ್ ಒಬ್ಬ ಅತೀಂದ್ರಿಯವಾದಿ (Transcendentalist). ಅವರು ಅಮೆರಿಕದ ಪ್ರಸಿದ್ಧ ಬರಹಗಾರರಾಗಿದ್ದ ಎಮರ್‌ಸನ್, ಥೋರೋ ಮೊದಲಾದವರ ಜೊತೆಗೆ ನಿಕಟ ಸ್ನೇಹವನ್ನು ಇಟ್ಟುಕೊಂಡಿದ್ದರು. ತತ್ತ್ವಶಾಸ್ತ್ರದಲ್ಲಿ ಆಸಕ್ತಿಯುಳ್ಳವರಾಗಿದ್ದ ಇವರು ದಾನಶೀಲರೂ ಆಗಿದ್ದರು. ಇದಲ್ಲದೆ ಸಮಾಜವಿಜ್ಞಾನದಲ್ಲಿಯೂ ಅವರಿಗೆ ಅಭಿರುಚಿ ಇತ್ತು. ಹೀಗೆ ಬೋಸ್ಟನ್ ನಗರದ ಒಬ್ಬ ಪ್ರತಿಷ್ಠಿತ ಮತ್ತು ಪ್ರಭಾವಶಾಲಿ

ವ್ಯಕ್ತಿಯನ್ನು ಸ್ವಾಮೀಜಿ ಭೇಟಿಮಾಡಿದರು.

ಬೋಸ್ಟನ್‌ನಲ್ಲಿ ಸ್ವಾಮೀಜಿ ಭೇಟಿಯಾದ ಇನ್ನೊಬ್ಬ ಪ್ರತಿಷ್ಠಿತ ವ್ಯಕ್ತಿಯೆಂದರೆ ಪ್ರೊ. ಜಾನ್ ಹೆನ್ರಿ ರೈಟ್. ಸ್ವಾಮೀಜಿ ಕ್ಯಾಥರೀನ್ ಸ್ಯಾನ್‌ಬೊರ್ನ್‌ಳ ನಿವಾಸದಲ್ಲಿ ವಾಸ್ತವ್ಯವನ್ನು ಹೂಡಿದ್ದರು. ಆ ಸಮಯದಲ್ಲಿ ಪ್ರೊ. ರೈಟ್ ಅವರು ಈ ಹಿಂದೂ ಸಂನ್ಯಾಸಿಯನ್ನು ಭೇಟಿಮಾಡಲು ಬಹಳ ಉತ್ಸಾಹವನ್ನು ತೋರಿದರು. ಸ್ವಾಮೀಜಿಯವರ ಬಗ್ಗೆ ಕ್ಯಾಥರೀನ್ ಅವರಿಗೆ ಮಾಹಿತಿ ನೀಡಿರಬಹುದು. ಆ ಸಮಯದಲ್ಲಿ ಪ್ರೊ. ರೈಟ್ ಸ್ವಾಮೀಜಿಯವರನ್ನು ತಾವು ಬೇಸಿಗೆ ಕಾಲವನ್ನು ಕಳೆಯುತ್ತಿದ್ದ ಅನ್ನಿಸ್‌ಕ್ವಮ್ ಎಂಬ ಸಮುದ್ರದಂಡೆಯ ಮೇಲಿನ ಗ್ರಾಮಕ್ಕೆ ಆಹ್ವಾನಿಸಿದರು. ಈ ಭೇಟಿಯ ಸಮಯದಲ್ಲಿಯೇ ತಮ್ಮ ಈ ಅಸಾಧಾರಣ ಅತಿಥಿಯ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ಮೂಡಿಸಿಕೊಂಡರು. ಇದು ಮುಂದೆ ಮಹತ್ತರವಾದ ಪರಿಣಾಮವನ್ನು ಉಂಟುಮಾಡಿದ್ದನ್ನು ನೋಡುತ್ತೇವೆ. ಅವರು ತಮ್ಮ ಪರಿಚಯ ಪತ್ರದಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಹೀಗೆ ಬರೆಯುತ್ತಾರೆ: ಇವರು ನಮ್ಮೆಲ್ಲ ಪಂಡಿತರಾದ ಪ್ರೊಫೆಸರುಗಳಿಗಿಂತಲೂ ಹೆಚ್ಚಿನ ವಿದ್ವತ್ತನ್ನು ಹೊಂದಿದವರು.



ಪ್ರೊ. ರೈಟ್ ಅವರು ಆಸಕ್ತಿಯಿಂದ ವ್ಯಾಸಂಗಮಾಡಿದ್ದ ವಿಷಯಗಳು ಹಲವಾರು: ಪ್ರಾಚೀನ ಭೂಗೋಳಶಾಸ್ತ್ರ , ಗ್ರೀಕ್ ಜನಾಂಗದ ಇತಿಹಾಸ, ಭಾಷಾ ಅಧ್ಯಯನ ಮುಂತಾದವು. ಆದರೆ ಅವರು ಬೋಧನೆ ಮಾಡುತ್ತಿದ್ದ ವಿಷಯಗಳು ಇಷ್ಟಕ್ಕೇ ಸೀಮಿತವಾಗಿರಲಿಲ್ಲ. ಅವರ ಜ್ಞಾನವು ವಿಶ್ವಕೋಶದಷ್ಟು ವಿಸ್ತಾರವಾಗಿತ್ತು ಎಂದು 'Dictionary of American Biography' ಎಂಬ ಅಧಿಕೃತ ಗ್ರಂಥದಲ್ಲಿ ನಮೂದಾಗಿದೆ. ತಾವೇ ಒಬ್ಬರು ಮಹಾನ್ ವಿದ್ವಾಂಸರಾಗಿದ್ದ ಕಾರಣ, ಪ್ರೊ. ರೈಟ್ ಅವರಿಗೆ ಸ್ವಾಮಿ ವಿವೇಕಾನಂದರ ಪ್ರತಿಭೆ ಮತ್ತು ವಿದ್ವತ್ತನ್ನು ಗುರುತಿಸಲು ಸಾಧ್ಯವಾಯಿತು. ಅವರು ಸ್ವಾಮೀಜಿಯವರೊಂದಿಗೆ ಬಹು ಸುದೀರ್ಘವಾದ ಸಂಭಾಷಣೆಯನ್ನು ನಡೆಸಿದರು. ಈ ಯುವ ಹಿಂದೂ ಸಂನ್ಯಾಸಿಯು ಒಬ್ಬ ಶ್ರೇಷ್ಠ ಆಧ್ಯಾತ್ಮಿಕ ವ್ಯಕ್ತಿಯಾಗಿದ್ದ ರಲ್ಲದೆ, ಒಬ್ಬ ಮಹಾನ್ ಪ್ರವಾದಿಯೂ ಆಗಿರುವುದನ್ನು ಪ್ರೊ. ರೈಟ್ ತಮ್ಮ ಅಂತರಂಗದ ಪ್ರಜ್ಞೆಯಿಂದ ಅರಿತುಕೊಂಡರು. ಹೀಗೆ ಸ್ವಾಮೀಜಿಯವರ ಈ ವಾರಾಂತ್ಯದ ಭೇಟಿ ಅವರ ಆತಿಥೇಯರಾಗಿದ್ದ ರೈಟ್ ದಂಪತಿಗಳಿಗೆ ಒಂದು ಸ್ಮರಣೀಯ ಘಟನೆಯಾಗಿ ಪರಿಣಮಿಸಿತು. ಅವರ ಪುತ್ರನಾದ ಜಾನ್ ಕೆ. ರೈಟ್ ಅವರು ಅಮೆರಿಕನ್ ಜಿಯೋಗ್ರಾಫಿಕಲ್ ಸೊಸೈಟಿಯ ನಿರ್ದೇಶಕರಾಗಿದ್ದರು. ಅವರ ವೃದ್ಧಾಪ್ಯದಲ್ಲಿಯೂ ಅವರು 'ಅವರು ನಮ್ಮ ಸ್ವಾಮಿ!' ಎಂದು ವಿವೇಕಾನಂದರನ್ನು ಸ್ಮರಿಸಿ ಕೊಳ್ಳುತ್ತಿದ್ದರು. ಸ್ವಾಮೀಜಿ ಅನ್ನಿಸ್‌ಕ್ವಮ್ ಗ್ರಾಮದಲ್ಲಿ ತಮ್ಮ ತಂದೆಯವರನ್ನು ಭೇಟಿಮಾಡಲು ಬಂದಿ ದ್ದಾಗ ಅವರು ಕೇವಲ ಎರಡು ವರ್ಷಗಳ ಮಗು.

ಸ್ವಾಮಿ ವಿವೇಕಾನಂದರು ವಾರಾಂತ್ಯವನ್ನು ಅನ್ನಿಸ್‌ಕ್ವಮ್ ಗ್ರಾಮದಲ್ಲಿ ಕಳೆದರು. ಅಲ್ಲಿ ಒಂದು ಚರ್ಚಿನಲ್ಲಿ ಪ್ರವಚನವನ್ನೂ ನೀಡಿದರು. ಅಲ್ಲಿನ ಗ್ರಾಮಸ್ಥರು ಸ್ವಾಮೀಜಿಯವರನ್ನು ಕಾಣಲು ಬಹಳ ಉತ್ಸುಕತೆಯನ್ನು ತೋರಿದರು. ಅಲ್ಲಿನ ಪತ್ರಿಕೆಗಳ ಸುದ್ದಿ ಮತ್ತು ಇತರ ಪತ್ರಗಳ ಮೂಲಕ ಸ್ವಾಮೀಜಿಯವರು ತಮ್ಮ ಪ್ರವಚನಗಳು ಮತ್ತು ಸಂಭಾಷಣೆಗಳಲ್ಲಿ ಪ್ರಸ್ತುತ ಪಡಿಸಿದ ವಿಚಾರಗಳ ಕೆಲವು ಹೊಳಹುಗಳನ್ನು ನಾವು ಕಾಣಬಹುದಾಗಿದೆ.

ಸ್ವಾಮೀಜಿ ಅಲ್ಲಿದ್ದಾಗ ಹಲವಾರು ಕಥೆಗಳನ್ನು ಹೇಳಿದರು. ಅದರಲ್ಲಿ ಒಂದು ಕಥೆ ಇದು: ಒಬ್ಬನನ್ನು ಅವನ ಹೆಂಡತಿ ಮನೆಯ ಸಮಸ್ಯೆಗಳಿಗಾಗಿ ಯಾವಾಗಲೂ ನಿಂದಿಸುತ್ತಿದ್ದಳಂತೆ. ಇತರರ ಯಶಸ್ಸನ್ನು ಅವನ ಎದುರು ಹೇಳಿಕೊಂಡು ಕರುಬುತ್ತಿದ್ದಳಂತೆ. ಎಲ್ಲ ವೈಫಲ್ಯಗಳಿಗೂ ಅವನನ್ನೇ ದೂರುತ್ತಿದ್ದಳಂತೆ. ನೀನು ಭಗವಂತನ ಸೇವೆಯನ್ನು ಇಷ್ಟು ವರ್ಷಗಳ ಕಾಲ ಮಾಡಿಕೊಂಡು ಬರುತ್ತಿದ್ದೀಯೆ. ಇದೇ ಏನು ಆ ದೇವರು ನಿನಗೆ ಪ್ರತಿಫಲವಾಗಿ ನೀಡಿದ್ದು? ಎಂದು ಹೀಯಾಳಿಸುತ್ತಿದ್ದಳಂತೆ. ಇದನ್ನೆಲ್ಲ ಶಾಂತವಾಗಿ ಕೇಳಿದ ಆ ಗಂಡ ಹೇಳುತ್ತಾನೆ: ನಾನು ಧರ್ಮದ ವಿಷಯದಲ್ಲಿ ವ್ಯಾಪಾರ ಮಾಡಲಾರೆ. ಈ ಪರ್ವತವನ್ನು ನೋಡು. ಅದು ನನಗೆ ಏನು ತಾನೇ ಸಹಾಯ ಮಾಡಿದೆ? ಅದಕ್ಕೆ ನಾನು ಏನು ತಾನೇ ಸಹಾಯ ಮಾಡಿದ್ದೇನೆ? ಇಷ್ಟಾದರೂ ನಾನು ಅದನ್ನು ಪ್ರೀತಿಸುತ್ತೇನೆ. ಏಕೆಂದರೆ ಅದು ಅಷ್ಟೊಂದು ಸುಂದರವಾಗಿದೆ. ಹಾಗೆಂದೇ ನಾನು ಅದನ್ನು ಪ್ರೀತಿಸುತ್ತೇನೆ. ಬೇರೆ ಯಾವ ಸ್ವಾರ್ಥವೂ ಇದರಲ್ಲಿ ಇಲ್ಲ. ನಾನು ಭಗವಂತನನ್ನು ಹೀಗೆಯೇ ಪ್ರೀತಿಸುವುದು.

ಇನ್ನೊಂದು ಕಥೆ ಹೀಗಿದೆ: ಒಬ್ಬ ರಾಜನು ಋಷಿಗೆ ಒಂದು ಬಹುಮಾನವನ್ನು ನೀಡಿದನು. ಆದರೆ ಋಷಿಯು ಅದನ್ನು ನಿರಾಕರಿಸಿದನು. ಆದರೆ ರಾಜನು ಒತ್ತಾಯಮಾಡಿದನು. ತನ್ನ ಜೊತೆಗೆ ಬರುವಂತೆ ಪ್ರಾರ್ಥಿಸಿಕೊಂಡನು. ಇಬ್ಬರೂ ಅರಮನೆಗೆ ಬಂದರು. ಅಲ್ಲಿ ರಾಜನು ದೇವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದುದನ್ನು ಋಷಿಯು ಕೇಳಿಸಿಕೊಂಡನು. ರಾಜನು ಸಂಪತ್ತು, ಅಧಿಕಾರ ಮತ್ತು ಆಯುಸ್ಸಿಗಾಗಿ ಬೇಡಿಕೊಳ್ಳುತ್ತಿದ್ದನು. ಋಷಿಯು ಅವನ ಪ್ರಾರ್ಥನೆಯನ್ನು ಕೇಳಿಸಿಕೊಳ್ಳುತ್ತಲೇ ಇದ್ದನು. ಕಡೆಗೆ ಅಲ್ಲಿಂದ ಎದ್ದು ಹೊರಟನು. ಅಷ್ಟರಲ್ಲಿ ರಾಜನು ಪ್ರಾರ್ಥನೆಯನ್ನು ಮುಗಿಸಿ ಕಣ್ಣುಬಿಟ್ಟನು. ಋಷಿಯು ಹೊರಟಿ

ದ್ದನ್ನು ಕಂಡನು. ಎಲ್ಲಿಗೆ ಹೋಗುತ್ತಿದ್ದೀಯೆ? ನಿನಗೆ ಏನು ಬೇಕು ಎಂದು ನೀನು ಇನ್ನೂ ಕೇಳಲೇ ಇಲ್ಲವಲ್ಲ! ಎಂದು ಹೇಳಿದನು. ಅದಕ್ಕೆ ಋಷಿಯು ಉತ್ತರ ಕೊಟ್ಟನು: ಏನು ನಾನು, ಒಬ್ಬ ಭಿಕ್ಷುಕನ ಹತ್ತಿರ ಕೇಳುವುದೆ?!

ನೆರೆದಿದ್ದವರಲ್ಲಿ ಒಬ್ಬನು ಕ್ರೈಸ್ತಧರ್ಮ ಮಾತ್ರವೇ ಜೀವಿಗಳನ್ನು ರಕ್ಷಿಸುವ ಶಕ್ತಿಯನ್ನು ಹೊಂದಿದೆ ಎಂದು ಹೇಳಿದನು. ಸ್ವಾಮೀಜಿ ಅವನನ್ನು ದಿಟ್ಟಿಸಿ ನೋಡಿದರು. ಕ್ರೈಸ್ತಧರ್ಮದಲ್ಲಿ ಅಷ್ಟೊಂದು ರಕ್ಷಣಾಶಕ್ತಿ ಇದ್ದರೆ, ಮೊದಲು ಕ್ರೈಸ್ತರಾಗಿದ್ದ ಇಥಿಯೋಪಿಯನ್ನರು, ಅಬಿಸಿನ್ನೀಯರು ಮುಂತಾದವರನ್ನು ಏತಕ್ಕೆ ತಾನೇ ರಕ್ಷಿಸಲಿಲ್ಲ? ಇದಲ್ಲದೆ ಸ್ವಾಮೀಜಿ ಪಾಶ್ಚಾತ್ಯರ ಅನೇಕ ಕ್ರೌರ್ಯಗಳನ್ನು, ಮಹಿಳೆಯರ ಮೇಲಿನ ದೌರ್ಜನ್ಯವನ್ನು ಎತ್ತಿಹೇಳಿದರು.

ಸ್ವಾಮೀಜಿಯವರು ತಮ್ಮ ಸಂಭಾಷಣೆಗಳಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿಯನ್ನು ಹಾಡಿಹೊಗಳಿದರು. ಆಕೆ ನಿಜವಾಗಲೂ ದೇವಿಯೇ ಸರಿ. ಅವಳು ಸೋಲುವ ಸಂದರ್ಭ ಬಂದಾಗ, ತನ್ನ ಖಡ್ಗದೊಂದಿಗೆ ನೆಲದ ಮೇಲೆ ಬಿದ್ದಳು ಮತ್ತು ಒಬ್ಬ ವೀರಾಗ್ರಣಿಯಂತೆ ಮರಣಹೊಂದಳು. ರಾಣಿಯ ಬಗ್ಗೆ ಮಾತನಾಡುವಾಗಲೆಲ್ಲ ಸ್ವಾಮೀಜಿಯವರ ಕಣ್ಣುಗಳಿಂದ ಅಶ್ರುಧಾರೆ ಸುರಿಯುತ್ತಿತ್ತು. ಅವರು ಭಾವೋದ್ವೇಗಕ್ಕೆ ಒಳಗಾಗುತ್ತಿದ್ದರು.

ಸ್ವಾಮೀಜಿಯವರು ತಮ್ಮ ಕಂಚಿನ ಕಂಠದಲ್ಲಿ ಉಪನಿಷತ್ತಿನ ಮಂತ್ರಗಳನ್ನು ಉಚ್ಚಾರ ಮಾಡುವುದನ್ನು ಕೇಳಿ ಅಲ್ಲಿ ನೆರೆದಿದ್ದವರು ಮುಗ್ಧರಾಗುತ್ತಿದ್ದರು. ಸ್ವಾಮೀಜಿ ಮನೋಹರವಾದ ಧ್ವನಿಯಲ್ಲಿ ಉಪನಿಷತ್ತುಗಳನ್ನು ಉಚ್ಚರಿಸಿ, ಅದರ ಅರ್ಥವನ್ನು ಸುಲಲಿತವಾದ ಇಂಗ್ಲಿಷ್ ಭಾಷೆಯಲ್ಲಿ ಅನುವಾದ ಮಾಡುತ್ತಿದ್ದರು. ತಮ್ಮ ಈ ಅನುಭೂತಿಪರವಾದ ಧರ್ಮಜೀವನದಲ್ಲಿ ಅವರು ಪರಿಪೂರ್ಣವಾಗಿ ಮತ್ತು ಪ್ರಶ್ನಾತೀತವಾಗಿ ಪರಿಶುದ್ಧ ಆನಂದವನ್ನು ಅನುಭವಿಸುತ್ತಿದ್ದರು.

ಸ್ವಾಮೀಜಿ ಅಂದಿನ ಶನಿವಾರದಂದು ದಿನವಿಡೀ ಪ್ರೊ. ರೈಟ್ ಅವರ ಕುಟುಂಬದ ಸದಸ್ಯರ ಜೊತೆಗೆ ನಿರರ್ಗಳವಾಗಿ ಸಂಭಾಷಣೆಯನ್ನು ನಡೆಸುತ್ತಿದ್ದರು. ಪ್ರೊಫೆಸರ್ ತಮ್ಮ ತಾಯಿಗೆ ಹೀಗೆ ಪತ್ರ ಬರೆಯುತ್ತಾರೆ: ''ಇದು ನಮಗೆಲ್ಲ ಒಂದು ರೀತಿಯ ಪುನರುಜ್ಜೀವನದ ಹಾಗೆ ಇದ್ದಿತು. ಅಂದು ಅವರು ಅನೇಕ ಧಾರ್ಮಿಕ ವಿಷಯಗಳ ಬಗ್ಗೆ ಮಾತನಾಡಿದರು.''

ಇದಲ್ಲದೆ ಕುಟುಂಬದ ಮಕ್ಕಳ ಜೊತೆಗೂ ಸ್ವಾಮೀಜಿ ಲೀಲಾಜಾಲವಾಗಿ ಬೆರೆತು ಆಟವಾಡುತ್ತಿದ್ದರು, ಇದಲ್ಲದೆ, ಅವರ ಜೊತೆಗೆ ತಮಾಷೆ ಮಾಡುತ್ತ ಮಾತುಕತೆಯಾಡುತ್ತಿದ್ದರು. ಪ್ರೊ. ರೈಟ್ ಅವರ ಪತ್ನಿ ಹೀಗೆ ಬರೆಯುತ್ತಾರೆ: ಸ್ವಾಮೀಜಿ ನಿಜವಾಗಿಯೂ ಮುಗ್ಧ ಮತ್ತು ಸರಳ ವ್ಯಕ್ತಿಯಾಗಿದ್ದರು. ತಮಗಾಗಿ ಅವರು ಏನನ್ನೂ ಬಯಸುತ್ತಿರಲಿಲ್ಲ, ಮಕ್ಕಳೊಡನೆ ಆಟವಾಡುತ್ತಿದ್ದರು; ಜೋರಾಗಿ ನಗುತ್ತಿದ್ದರು. ಒಂದು ಕಡ್ಡಿಯನ್ನು ತಮ್ಮ ಬೆರಳುಗಳ ನಡುವೆ ಕುಣಿಸುತ್ತ, ತಮ್ಮಂತೆ ಬೇರೆ ಯಾರಿಗೂ ಇದನ್ನು ಮಾಡಲು ಸಾಧ್ಯವಿಲ್ಲವೆಂದು ಹರ್ಷದಲ್ಲಿ ಮುಳುಗಿರುತ್ತಿದ್ದರು. ಇನ್ನೊಂದು ಆಸಕ್ತಿಯ ವಿಷಯವೆಂದರೆ ಸ್ವಾಮೀಜಿ ಮಕ್ಕಳಿಗೂ ಕೂಡ ಉಪನಿಷತ್ತಿನ ವಾಕ್ಯಗಳನ್ನು ಉಲ್ಲೇಖಿಸಿ ಹೇಳುತ್ತಿದ್ದರು; ಮಕ್ಕಳ ಕಾಲ್ಪನಿಕ ಶಕ್ತಿಗೆ ತಟ್ಟುವ ಹಾಗೆ ಸರಳವಾದ ಭಾಷೆಯಿಂದ ಅವರು ಮನ ಮುಟ್ಟುವಂತೆ ಬೋಧಿಸುತ್ತಿದ್ದರು. ಹೀಗಾಗಿ ಆ ಮಕ್ಕಳೂ ಮುಂದೆ ಧಾರ್ಮಿಕ ವ್ಯಕ್ತಿಗಳಾಗುವುದನ್ನು ನೋಡುತ್ತೇವೆ.

ಶನಿವಾರದ ಸಾಯಂಕಾಲದವರೆಗೂ ಸ್ವಾಮೀಜಿ ಸಂಭಾಷಣೆಯನ್ನು ನಡೆಸುತ್ತಲೇ ಇದ್ದರು. ಅಂದು ಸಂಜೆ ಮಕ್ಕಳೆಲ್ಲ ಸೇರಿ ಒಂದು ನಾಟಕವಾಡಿದರು. ಇದನ್ನು ವೀಕ್ಷಿಸಿ ಸ್ವಾಮೀಜಿ ಬಹಳ ಸಂತೋಷಪಟ್ಟರು. ಮರುದಿನ ಭಾನುವಾರ ಕೂಡ, ಬೆಳಗ್ಗೆ ಮಧ್ಯಾಹ್ನವೆಲ್ಲ ಸ್ವಾಮೀಜಿ ಧಾರ್ಮಿಕ ಸಂಭಾಷಣೆಯಲ್ಲಿಯೇ ತೊಡಗಿದ್ದರು. ಅಂದು ಸಂಜೆ ಅವರು ಅನ್ನಿಸ್ಕ್ವಮ್‌ನ ಯೂನಿವರ್ಸಲಿಸ್ಟ್ ಚರ್ಚ್‌ನಲ್ಲಿ ಪ್ರವಚನವನ್ನು ಮಾಡಿದರು. ಅಂದು ಸ್ವಾಮೀಜಿ ಭಾರತದ ಕಟ್ಟುಪಾಡುಗಳು ಮತ್ತು ಜೀವನವಿಧಾನಗಳ ಬಗ್ಗೆ ಮಾತನಾಡಿದರು. ಕೆಲವು ಪತ್ರಿಕೆಗಳು ಈ ಭಾಷಣದ ವರದಿಯನ್ನು ಪ್ರಕಟಿಸಿದವು.

ಒಬ್ಬ ಮಹಿಳೆ ಒಂದು ಪತ್ರದಲ್ಲಿ ಸ್ವಾಮೀಜಿಯವರ ಭೇಟಿಯ ಬಗ್ಗೆ ಹೀಗೆ ಬರೆಯುತ್ತಾಳೆ: ''ಅವರ ದರ್ಶನವಾದದ್ದು ನನ್ನ ಭಾಗ್ಯವೆಂದೇ ನಾನು ತಿಳಿಯುತ್ತೇನೆ. ಅವರ ರೂಪು ಮತ್ತು ಪೋಷಾಕುಗಳಲ್ಲಿ ಅವರು ಬಹಳ ಸುಂದರವಾಗಿ ಕಾಣುತ್ತಿದ್ದರು. ತಮ್ಮ ತಲೆಯ ಮೇಲೆ ಒಂದು ಪೇಟವನ್ನು ಸುತ್ತಿಕೊಂಡಿದ್ದರು. ಕಿತ್ತಳೆಯ ಬಣ್ಣದ ದಪ್ಪವಾದ ಉಣ್ಣೆಯ ಬಟ್ಟೆಯಲ್ಲಿ ಹೊಲಿದ ನಿಲುವಂಗಿಯನ್ನು ಧರಿಸಿದ್ದರು. ಅವರದು ಮನಮೋಹಕ ಧ್ವನಿ. ಅನ್ನಿಸ್ಕ್ವಮ್‌ನ ಗ್ರಾಮೀಣ ಚರ್ಚ್‌ನಲ್ಲಿ ಅವರು ತಮ್ಮ ಭಾಷಣದ ಪ್ರಾರಂಭದಲ್ಲಿಯೇ ಇತರ ಜನರ ಧರ್ಮಗಳಿಗೆ ಗೌರವವನ್ನು ನೀಡುವುದನ್ನು ಹಿಂದೂಗಳಿಗೆ ಬಾಲ್ಯದಲ್ಲಿಯೇ ಹೇಳಿಕೊಡಲಾಗುತ್ತದೆ ಎಂದರು.''

ಸ್ವಾಮೀಜಿ, ೧೮೯೩ನೆಯ ಇಸವಿ, ಆಗಸ್ಟ್ ೨೮, ಸೋಮವಾರದಂದು, ಸಲೇಮ್ ಎಂಬ ಪಟ್ಟಣಕ್ಕೆ ಹೊರಟರು. ಅಂದು ಮಳೆ ಬೀಳುತ್ತಿತ್ತು. ಮರುದಿನ ಮಂಗಳವಾರ ರಾತ್ರಿ, ಬಿರುಗಾಳಿಯ ವಾತಾವರಣವೂ ಇತ್ತು. ಸ್ವಾಮಿ ವಿವೇಕಾನಂದರು ಬಿರುಗಾಳಿಯ ಸಂನ್ಯಾಸಿ ಎಂದೇ ಪ್ರಸಿದ್ಧರಾಗಿದ್ದಾರೆ. ಇಂದೂ ಕೂಡ, ಅಮೆರಿಕದ ತಮ್ಮ ಮೊಟ್ಟಮೊದಲ ಭಾಷಣವನ್ನು ಮುಗಿಸಿಕೊಂಡು ಸ್ವಾಮೀಜಿ ಮುಗಿಸಿಕೊಂಡು, ತೆರಳುತ್ತಿದ್ದಾಗ, ಬಿರುಗಾಳಿ ಬಂದದ್ದು ವಿಸ್ಮಯವೇ ಸರಿ! ಸಲೇಮ್ ಪಟ್ಟಣ ಅಲ್ಲಿಂದ ೧೫ ಕಿ.ಮಿ. ದೂರದಲ್ಲಿದೆ. ಅಲ್ಲಿಯೂ ಸ್ವಾಮೀಜಿಯವರ ಪ್ರವಚನ ಕಾರ್ಯಕ್ರಮವಿತ್ತು. ಇಲ್ಲಿಗೆ ಅವರ